divetted to any other place because industrywise Kolar is Zero Kindly look into the matter and keep in mind that Kolar/district is given an opportunity.

ಶ್ರೀ ಆರ್. ವಿ ದೇಶಪಾಂಡೆ : ಅವರು ಏನೇನು ಹೇಳಿದ್ದಾರೆ, ಅವೆಲ್ಲವನ್ನೂ ಪರಿಶೀಲನೆ ಮಾಡುತ್ತೇನೆ.

ಉಪಾಧ್ಯಕ್ಷರು: ಕೋಲಾರ ಜಿಲ್ಲೆಯಲ್ಲಿ ಸಾಕಷ್ಟು ಅವಕಾಶ ಇದೆ ಎಂಬುದನ್ನು ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ : ಕೋಲಾರ ಜಿಲ್ಲೆಯಲ್ಲಿ ಸಾಕಷ್ಟು ಅವಕಾಶ ಇದೆ. ನಮ್ಮ ಭೈರೇಗೌಡರು ನನ್ನ ಕಿವಿಯಲ್ಲಿ ಹೇಳುತ್ತಿದ್ದರು, ಅಲ್ಲೊಂದು ರನ್‌ವೇ ಕೂಡ ಇದೆ. ನಾನೂ ನೋಡಿದ್ದೇನೆ. ಅಲ್ಲಿ ಅವಕಾಶ ಇಲ್ಲವೆಂದು ಹೇಳುವುದಿಲ್ಲ. ಆದರೆ, ಇದೆಲ್ಲಾ ಕೆಲಸ ಸಿವಿಲ್ ಎವಿಯೇಷನ್ ಮಿನಿಸ್ಟರಿಂದ ಆಗಬೇಕಾಗಿದೆ. ನಮಗೆ ಬರೀ ಶಿಫಾರಸ್ಸು ಮಾಡತಕ್ಕ ಅಧಿಕಾರ ಇದೆ. ಅದರೂ ಸಹ, ಅದರ ಬಗ್ಗೆ ಎಲ್ಲಾರ ಸಹಕಾರದಿಂದ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತೇನೆ.

ವಿಷಯ : ಸೊರಬ ಟೌನಿನಲ್ಲಿ ಕುಡಿಯುವ ನೀರಿನ ಸಮಸ್ಯೆ.

236 (1955) ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಸೊರಬ ಟೌನಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ಸಮಸ್ಯೆಯನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀ ಬಿ. ಎನ್ ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು)

ಅ) ಬಂದಿದೆ.

ಆ) ಈ ಪಟ್ಟಣಕ್ಕೆ ಶಿವಮೊಗ್ಗ ಜಿಲ್ಲಾ ಪಂಚಾಯತ್‌ವತಿಯಿಂದ ರೂ. 2.86 ಲಕ್ಷ ರೂ.ಗಳಿಗೆ ಒಂದು ನೀರು ಸರಬರಾಜು ಯೋಜನೆಯನ್ನು. ತಯಾರಿಸಿದ್ದು ಈ ಯೋಜನೆಯು ಸದ್ಯದಲ್ಲಿ ಪ್ರಗತಿಯಲ್ಲಿದೆ.ಈ ಯೋಜನೆಯಲ್ಲಿ ದಂಡವತಿ ನದಿಗೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣ ಮಾಡಲಾಗುತ್ತಿದ್ದು ಈ ಕೆಲಸಕ್ಕೆ ಈಗಾಗಲೇ ಜಿಲ್ಲಾ ಪಂಚಾಯತ್‌ನವರು

ರೂ. 1.40 ಲಕ್ಷಗಳನ್ನು ವೆಚ್ಚ ಮಾಡಿರುತ್ತಾರೆ. ಇತ್ತೀಚೆಗೆ ಈ ಪಟ್ಟಣವು ಕರ್ನಾಟಕ ನಗರ ನೀರು ಸರಬರಾಜು ಮಂಡಳಿಯ ವ್ಯಾಪ್ತಿಗೆ ಬಂದಿದ್ದು, ಮುಂದೆ ಬೇಕಾಗುವ ಹೊಸ ಯೋಜನೆಗಳನ್ನು ಮಂಡಳಿ ಕೈಗೊಳ್ಳಲಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ಸೊರಬ ಈಗ ತಾನೇ ಕರ್ನಾಟಕ ರಾಜ್ಯ ನಗರ ನೀರು ಸರಬರಾಜು ಮಂಡಳಿಯ ವ್ಯಾಪ್ತಿಗೆ ಬಂದಿದೆ ಎಂದು ಹೇಳಿದ್ದೀರಿ. ಇದಕ್ಕಿಂತ ಮುಂಚೆ 1.40 ಲಕ್ಷ ರೂಪಾಯಿಗಳನ್ನು ದಂಡಾವತಿ ನದಿಗೆ ಬ್ಯಾರೇಜ್ ಕಟ್ಟಲು ಖರ್ಚುಮಾಡಿದ್ದೀರಿ ಈ ಹಣ ಎತಕ್ಕೂ ಉಪಯೋಗ ಇಲ್ಲದಂತೆ ಆಗಿದೆ. ಸೊರಬಾ ತಾಲ್ಲೂಕಿನಲ್ಲಿ ಸುಮಾರು 20 ಸಾವಿರ ಜನಕ್ಕೆ ಕೇವಲ ಎರಡೇ ಎರಡು ಕೊಳವೆ ಬಾವಿಗಳಿಂದ ನೀರು ಸರಬಾರಾಜು ಮಾಡುತ್ತಿರುವುದರಿಂದ ನೀರಿನ ತೊಂದರೆ ಬಹಳ ಇದೆ. ಈ ದಂಡವತಿ ನದಿಯಿಂದ ನೀರು ಸಾಕಷ್ಟು ಈಗಾಗಲೇ ಹೋಗಿದೆ. ಆದ್ದರಿಂದ ಆದಷ್ಟು ಬೇಗ ಒಂದು ಬ್ಯಾರೇಜ್ ಮಾಡಿ. ಮತ್ತು ನಿಧಾನ ಆದರೆ ಮಳೆಗಾಲ ಶುರುವಾಗುತ್ತದೆ. ಮುಂದಿನ ವರ್ಷಕ್ಕೆ ಹೋಗುತ್ತದೆ. ಆದಕಾರಣ ಬ್ಯಾರೇಜ್ ಬೇಗ ಮಾಡಬೇಕು. ಇಲ್ಲದಿದ್ದರೆ ಈ 20 ಸಾವಿರ ಜನಕ್ಕೆ ಇನ್ನೂ ಒಂದು 2-3 ಕೊಳವೇ ಬಾವಿಗಳನ್ನು ಹಾಕಿಕೊಂಡಬೇಕೆಂದು ನಾನು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಸೊರಬ ಪಟ್ಟಣದಲ್ಲಿ ಸುಮಾರು 10 ಸಾವಿರ ಜನಸಂಖ್ಯೆ ಇದೆ. ಅಲ್ಲಿಗೆ ಸುಮಾರು 21 ಕೊಳವೇ ಬಾವಿಗಳ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಅದರಲ್ಲಿ 7 ಕೊಳವೇ ಬಾವಿಗಳಿಗೆ ಪವರ್ ಪಂಪ್‌ಸೆಟ್ಸ್ ಹಾಕಿದೆ. ಇನ್ನು ಉಳಿದಂತಹ ಕೊಳವೇ ಬಾವಿಗಳಿಗೆ ಹ್ಯಾಂಡ್ ಪಂಪ್‌ಸೆಟ್ಸ್‌ಗಳನ್ನು ಅಳವಡಿಸಲಾಗಿದೆ. ಇದು ಹಿಂದೆ ಮಂಡಲ್ ಪಂಚಾಯತಿ ಆಗಿತ್ತು. ಜಿಲ್ಲಾ ಪರಿಷತ್ತು ವತಿಯಿಂದ ಕೊಳವೆ ಬಾವಿಗಳ ಮೂಲಕ ನೀರು ಸರಬರಾಜು ಆಗುತ್ತಿತ್ತು. ಈಗ ಅದು ಟೌನ್ ಪಂಚಾಯಿತಿ ಆಗಿ ಪರಿವರ್ತನೆ ಆಗಿ ಈಗ ನಮ್ಮ ಕರ್ನಾಟಕ ರಾಜ್ಯ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಸೇರಿದೆ. ಸುಮಾರು 49 ಪಂಚಾಯತಿಗಳು ಸರ್ಕಾರಿ ಆಜ್ಞೆಯ ಮೂಲಕ ಇತ್ತೀಚೆಗೆ ನಮ್ಮ ವ್ಯಾಪ್ತಿಗೆ ಒಳಪಟ್ಟಿವೆ. ಸುಮಾರು 2 ಲಕ್ಷ 86 ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ದಂಡಾವತಿ ನದಿಗೆ ಬ್ಯಾರೇಜ್ ಮಾಡಿ ನೀರು ಅಲ್ಲಿ ನಿಲ್ಲುವಂತೆ ಮಾಡಿ ನೀರು ಸರಬರಾಜು ಮಾಡುವಂತಹ ತೀರ್ಮಾನವನ್ನು ಬಹಳ ಹಿಂದೆಯೇ ತೆಗೆದುಕೊಂಡಿದ್ದರು. ಈಗಾಗಲೇ ಸುಮಾರು 1.40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನೂ 2 ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತಿಳಿಸಿ ಆ ಕಾಮಗಾರಿಯನ್ನು ತೆಗೆದುಕೊಳ್ಳಿ

ಎಂದು ಹೇಳಿದ್ದೇವೆ. ಆ ಬ್ಯಾರೇಜ್‌ನ್ನು ಸರಿಯಾಗಿ ಮಾಡಿ ಆ ಮೂಲದಿಂದ ನೀರನ್ನು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು ಎಂದು ಹೇಳಿ ಅಧಿಕಾರಿಗಳಿಗೆ ತಿಳಿಸಲಾಗಿದೆ. ಇದು ಪೈಪ್ಡ್ ಸಪ್ಲೈ ಆದ್ದರಿಂದ ಎ.ಯು ಡಬ್ಲಿ ಎಸ್ ಅಲ್ಲಿ ಕೇಂದ್ರ ಸರ್ಕಾರ ಕೊಡುವಂತಹ 50 ಪರ್ಸೆಂಟ್ ಗ್ರಾ ್ಯಂಟ್ ಮತ್ತು ರಾಜ್ಯ ಸರ್ಕಾರ ಕೊಡುವಂತಹ 50 ಪರ್ಸೆಂಟ್ ಗ್ರಾ ್ಯಂಟ್ ಎರಡೂ ಸೇರಿ ಆ ಪೈವ್ಡ್ ವಾಟರ್ ಸಪ್ಲೈ ಮೂಲಕ ಕೊಡುವಂತಹ ನೀರನ್ನು ಕೊಡಲು ಈ ಸೊರಬ ಪಟ್ಟಣವನ್ನೂ ಸಹ 1997-98ನೇ ಸಾಲಿನಲ್ಲಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟು ಅಲ್ಲಿನ ನೀರಿನ ತೊಂದರೆ ಏನು ಇದೆ ಅದಕ್ಕೆ ಸಧ್ಯಕ್ಕೆ ಅಲ್ಲಿ ಇನ್ನೂ ಕೆಲವು ಕೊಳವೆ ಬಾವಿಗಳನ್ನು ಹಾಕಿ ಅಲ್ಲಿಗೆ ನೀರನ್ನು ಕೊಡುವಂತಹ ಕಾರ್ಯವನ್ನು ಮಾಡುತ್ತೇವೆ.

ಉಪಾಧ್ಯಕ್ಷರು : ಮಾನ್ಯ ಡಿ.ಎಸ್. ಮಾದಪ್ಪನವರ ಪ್ರಶ್ನೆಗೆ ಸಮಯ ಕೇಳಿದ್ದಾರೆ. ಮತ್ತು ಮಾನ್ಯ ಕರಡಿ ಸಂಗಣ್ಣ ಅವರ ಪ್ರಶ್ನೆಗೂ ಸಹ ಸಮಯ ಕೇಳಿದ್ದಾರೆ. ಮಾನ್ಯ ಮಂತ್ರಿಗಳು ಉತ್ತರ ಕಳುಹಿಸಿಕೊಡುತ್ತಾರೆ.

ವಿಷಯ : ಹುಬ್ಬಳ್ಳಿ ಟೌನಿನ ಮಹೇದೇವ ಜವಳಿ ಗಿರಣಿ ಪುನಶ್ಚೇತನ

239 (1902)-ಶ್ರೀ ಜಗದೀಶ್ ಶೆಟ್ಟರ್, (ಹುಬ್ಬಳ್ಳಿ ಗ್ರಾಮಂತರ) : ಮಾನ್ಯ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿಯ ಮಹದೇವಿ ಜವಳಿ ಗಿರಣಿ ಮುಚ್ಚಿ ಹೋಗುವಂತಹ ಸ್ಥಿತಿಯಲ್ಲಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಅದಕ್ಕೆ ಕಾರಣಗಳೇನು?

ಆ) ಸದರಿ ಗಿರಣಿಯ ಕಾರ್ಮಿಕ ವರ್ಗಕ್ಕೆ ಕಳೆದ ಕೆಲವು ತಿಂಗಳಿಂದ ವೇತನ ನೀಡದಿರುವುದರಿಂದ ಹಾಗೂ ಗಿರಣಿಯ ಯಂತ್ರಗಳನ್ನು ಹಂತ ಹಂತವಾಗಿ ಮಾರಾಟ ಮಾಡುತ್ತಿರುವುದು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) 1996-97ನೇ ಸಾಲಿನಲ್ಲಿ ಈ ಗಿರಣಿಯ ಪುನಶ್ಚೇತನದ ಸಲುವಾಗಿ ಹಣ ಬಿಡುಗಡೆ ಮಾಡಲಾಗಿದೆಯೇ? ಎಷ್ಟು ಬಿಡುಗಡೆ ಮಾಡಲಾಗಿದೆ ಹಾಗೂ ಗಿರಣಿ ಪುನಶ್ಚೇತನಕ್ಕೆ ಇಲ್ಲಿಯವರೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು)

ಅ) ಹೌದು. ಇದಕ್ಕೆ ಕಾರಣಗಳು ಈ ಕೆಳಗಿನಂತಿವೆ :

1) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ವಿದ್ಯುತ್ ಕಡಿತ, ವಿದ್ಯುತ್ ಕಡಿತವಲ್ಲದೆ ಅನುಕೂಲಕ್ಕೆ ವಿದ್ಯುತ್ ಕಡಿತ